## ಹೆಚ್ಚುವರಿ ಸಿವಿಲ್ **ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

## ಸಿ.ಸಿ. 101/2019

| | | |
|---|---|---|
| ಸಾಕ್ಷಿಯ ಹೆಸರುಃ | ರಘು ಎಂ.ಜೆ | ಫ್ರಾಸಾಃಃ 3 |
| ತಂದೆ ಹೆಸರುಃ | ಜವರಶೆಟ್ಟಿ | ಚಾಸಾಃಃ 10 |
| ವಯಸ್ಸುಃ | 58 ವರ್ಷ | ಪ್ರಮಾಣೀಕರಿಸಿದ<br>ದಿಃ 29.09.2025. |
| ಉದ್ಯೋಗಃ | ಅಬಕಾರಿ ಉಪನಿರೀಕ್ಷಕರು,<br>ಪಿರಿಯಾಪಟ್ಟಣ ವಲಯ,<br>ಪಿರಿಯಾಪಟ್ಟಣ | |
| ವಾಸಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ **ರಿಂದಃ**

ನಾನು ನವೆಂಬರ್‌-2016 ಇಲ್ಲಿಯವರೆಗೆ ಅಬಕಾರಿ ಉಪನಿರೀಕ್ಷಕನಾಗಿ, ಅಬಕಾರಿ ನಿರೀಕ್ಷಕರ ಕಚೇರಿ, ಪಿರಿಯಾಪಟ್ಟಣ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 30.06.2018 ರಂದು ಚಾಸಾ-9 ರವರಿಂದ ಕಡತ ಮತ್ತು ಮು.ಮಾಲನ್ನು ಸ್ವೀಕರಿಸಿ, ದಿಃ 27.07.2018 ರಂದು ಅಮಾತ್ತು ಪಡಿಸಿಕೊಂಡ ಮಾದರಿ ಮದ್ಯವನ್ನು ಚಾಸಾ-6 ರವರ ಮುಖಾಂತರ ರಾಸಾಯನಿಕ ಪರೀಕ್ಷಗೆ ಕಳುಹಿಸಲಾಯಿತು. ಅದೇ ದಿನ ಬೈಲಕುಪ್ಪೆ ಪಿ ಡಿ ಓ ರವರಿಗೆ ಮನೆಯ ಮಾಲೀಕತ್ವವನ್ನು ಕೋರಿ ಮನವಿ ಸಲ್ಲಿಸಲಾಯಿತು.

3. ದಿಃ 03.09.2018 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಚಾಸಾ-6 ರವರ ಮುಂಖಾತರ ಸ್ವೀಕರಿಸಿರುತ್ತೇನೆ. ಅದೇ ದಿನ ಬೈಲುಕುಪ್ಪೆ ಪಿ ಡಿ ಓ ರವರು

ಮನೆಯ ಮಾಲೀಕತ್ವವು ಆರೋಪಿತನ ತಾಯಿಯಾದ ಪದ್ಮಮ್ಮ ಕೋ ರಂಗಸ್ವಾಮಿ ಶೆಟ್ಟಿ ಯವರಿಗೆ ಸೇರಿದ್ದು ಎಂದು ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲು ಮತ್ತು ವರದಿಯನ್ನು ನೀಡಿರುತ್ತಾರೆ. ಸದರಿ ಮನೆಯ ಮಾಲೀಕರಿಗೆ ದಿಃ 29.09.2018 ರಂದು ಕಾರಣ ಕೇಳಿ ನೋಟೀಸನ್ನು ನೀಡಿರುತ್ತೇನೆ. ಸದರಿಯವರು ದಿಃ 04.10.2018 ರಂದು ಹೇಳಿಕೆಯನ್ನು ನೀಡಿದ್ದು, ನಾನು ಈ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲ ನನ್ನ ಮಗನೇ ಕೃತ್ಯ ಎಸಗಿದ್ದಾನೆಂದು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡಲಾಯಿತು. ನಂತರ ಕಡತವನ್ನು ಪರಿಶೀಲಿಸಿ ಆರೋಪಿತ ಮೋಲ್ನೋಟಕ್ಕೆ ಆರೋಪಿ ಎಡಗಿದ್ದು ಆತನ ವಿರುದ್ಧ ದೊಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು FSL ರವರಿಗೆ ನೀಡಿರುವ ಮನವಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.5(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಪಿ ಡಿ ಓ ರವರಿಗೆ ನೀಡಿರುವ ಮನವಿ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-6** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.6(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮನೆಯ ಮಾಲೀಕರಿಗೆ ಕಾರಣ ಕೇಳಿ ನೋಟೀಸಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.7(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮನೆಯ ಮಾಲೀಕರು ನೀಡಿರುವ ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-8** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.8(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ **ಪರ ಶ್ರೀ** ಕೆ ಬಿ ಎಸ್ **ವಕೀಲರಿಂದಃ**

4. ನಾನು ಕಡತವನ್ನು ಸ್ವೀಕರಿಸಿದ ನಂತರ ಘಟನಾ ಸ್ಥಳಕ್ಕೆ ಬೇಟಿ ನೀಡಿ ಸ್ಥಳ ಮಹಜರು ಜರುಗಿಸಿಲ್ಲ. ಆ ರೀತಿ ಜರುಗಿಸುವ ಅವಶ್ಯಕತೆ ಇರಲಿಲ್ಲ. ಮಾದರಿಗಳನ್ನು ಸೀಲು

ಮಾಡಿದ್ದರಿಂದ ಅದು ಯಾವ ಬ್ಯಾಚ್ ಸಂಖ್ಯೆ ಮತ್ತು ಅದರ ಕಂಪನಿ ಹೆಸರನ್ನು ಗಮನಿಸಿಲ್ಲ. ಆದ ಕಾರಣ ಯಾವ ಮು.ಮಾಲುಗಳನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ ಎಲ್ಲಾ ಮು.ಮಾಲುಗಳನ್ನು ಮಾದರಿ ತೆಗೆದಿದ್ದರು. ಅವುಗಳನ್ನು ನಾನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದೆ. ಮಾದರಿ ತೆಗೆದ ಮಧ್ಯಕ್ಕೂ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮು.ಮಾಲುಗಳಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತನ ಹೆಸರಿನಲ್ಲಿ ಆ ಸ್ಥಳ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ತಾಯಿಯ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ನನ್ನ ತನಿಖಾ ಕಾಲಕ್ಕೆ ಪಂಚರಿಗೆ ನೋಟೀಸು ನೀಡಿ ಹೇಳಿಕೆ ಪಡೆಯಲು ತೊಂದರೆ ಇರಲಿಲ್ಲ, ಕಾರಣ ಚಾಸಾ–9 ರವರೇ ಪಂಚರ ಹೇಳಿಕೆಗಳನ್ನು ಪಡೆದಿದ್ದರು. ಆರೋಪಿತನ ಹೇಳಿಕೆಯನ್ನು ಪಡೆದಿಲ್ಲ. ನಾನು ಯಾವುದೇ ತನಿಖೆ ಕೈಗೊಳ್ಳದೇ ಸುಳ್ಳು ದೋಷಾರೋಪಣ ಪಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದೊಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.